ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ವಯಸ್ಕರು 662, ಮಕ್ಕಳು 100 ಅಲ್ಲದೆ ಉಚಿತ ಪ್ರವೇಶ ಶಾಲಾ ಮಕ್ಕಳು.

ಆ) ವಯಸ್ಕರಿಗೆ ರೂ.2.00

ಮಕ್ಕಳಿಗೆ ರೂ. 1.00

ಇ) ಹೌದು.

ಈ) ಅಕ್ವೇರಿಯಂ ನಿರ್ವಹಣೆಗೆ ಮೀನುಗಾರಿಕೆ ಇಲಾಖೆಯಿಂದ ಈ ರೀತಿ ಶುಲ್ಕ ವಸೂಲು ಮಾಡಲಾಗುತ್ತಿದೆ.

ಉ) 1998-99ನೇ ಸಾಲಿನಲ್ಲಿ ಸುಮಾರು ರೂ.3.00 ಲಕ್ಷ ವೆಚ್ಚ ಮಾಡಿ ನವೀಕರಿಸಲಾಗಿದೆ. ಮುಂದಿನ ವರ್ಷಗಳಲ್ಲಿ ಉಳಿದಿರುವ ಕೆಲಸಗಳನ್ನು ಹಂತ ಹಂತವಾಗಿ ಅಭಿವೃದ್ಧಿಗೊಳಿಸಲು ಕ್ರಮ ಹಾಕಿಕೊಳ್ಳಲಾಗಿದೆ.

ಕನ್ನಡ ಸಂಘಗಳಿಗೆ ಕನ್ನಡ ರಾಜ್ಯೋತ್ಸವ ಆಚರಿಸಲು ಸಹಾಯಧನ.

73(287)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕನ್ನಡ ಸಂಘಗಳು ಪ್ರತಿ ವರ್ಷ ಆಚರಿಸುವ ರಾಜ್ಯೋತ್ಸವ ಸಮಾರಂಭಕ್ಕೆ ಸರ್ಕಾರವು ಸಹಾಯ ಧನವನ್ನು ನೀಡುತ್ತಿದೆಯೆ?

ಆ) ಇಲ್ಲದಿದ್ದಲ್ಲಿ, ಕನ್ನಡ ಸಂಘ ಸಂಸ್ಥೆಗಳು ಕನ್ನಡ ರಾಜ್ಯೋತ್ಸವವನ್ನು ಆಚರಿಸಲು ಸಹಾಯ ಧನವನ್ನು ನೀಡುವ ಬಗ್ಗೆ ಸರ್ಕಾರ ಉದ್ದೇಶಿಸಿದೆಯೆ?

ಶ್ರೀಮತಿ ರಾಣಿಸತೀಶ್ (ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು):

ಅ) ಹೌದು.

ಆ) ಉದ್ಭವಿಸುವುದಿಲ್ಲ.